# ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 754
ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 13.03.2025
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ತುಂಗಭದ್ರ ಜಲಾಶಯದ ನೀರಿನ ಸಂಗ್ರಹಣಾ ಸಾಮರ್ಥ್ಯ ಒಟ್ಟು 3.73 ಘನ ಕಿ.ಮೀ. (132 TMC) ಆಗಿದ್ದು, ಜಲಾಶಯದಲ್ಲಿ 30 TMC ಹೂಳು ತುಂಬಿರುವ ಹಿನ್ನೆಲೆಯಲ್ಲಿ ಜಲಾಶಯದ ಸಂಗ್ರಹಣಾ ಸಾಮರ್ಥ್ಯವು 100 TMCಗೆ ಇಳಿದಿದೆ, ಸದರಿ ಹೂಳನ್ನು ತೆರವು ಮಾಡಲು ಆಗದಿರುವ ಕಾರಣ ನವಲಿ ಬಳಿ ಸಮಾನಾಂತರ ಅಣೆಕಟ್ಟೆಯನ್ನು ನಿರ್ಮಾಣ ಮಾಡುವ ಕ್ರಿಯಾ ಯೋಜನೆ ಯಾವ ಹಂತದಲ್ಲಿದೆ? (ವಿವರ ಒದಗಿಸುವುದು) | ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳಿನಿಂದಾಗಿ ಉಂಟಾಗಿರುವ ನೀರಿನ ಸಂಗ್ರಹಣೆಯಲ್ಲಿನ ಕೊರತೆಯನ್ನು ನೀಗಿಸಲು ಪರ್ಯಾಯ ಮಾರ್ಗೋಪಾಯವಾಗಿ ಕೊಪ್ಪಳ ಜಿಲ್ಲೆಯ ನವಲಿ ಗ್ರಾಮದ ಹತ್ತಿರ ಸಮತೋಲನಾ ಜಲಾಶಯ ನಿರ್ಮಿಸುವ ಯೋಜನೆಯನ್ನು ರೂಪಿಸಲಾಗಿದೆ.<br>ತುಂಗಭದ್ರಾ ಯೋಜನೆಯು ಅಂತರ ರಾಜ್ಯ ಯೋಜನೆಯಾಗಿರುವುದರಿಂದ ಸದರಿ ಯೋಜನೆಗೆ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಒಪ್ಪಿಗೆ/ಸಹಕಾರ ಮತ್ತು ತುಂಗಭದ್ರಾ ಮಂಡಳಿಯ ಸಹಮತ ಅಗತ್ಯವಿರುತ್ತದೆ.<br>ಆದ್ದರಿಂದ, ಸದರಿ ಯೋಜನೆಯ ರೂ.15,601.00 ಕೋಟಿ ಮೊತ್ತದ (2021-22ನೇ ಸಾಲಿನ ಏಕರೂಪ ದರಪಟ್ಟಿಯನ್ವಯ) ವಿವರವಾದ ವರದಿಯನ್ನು ಸಿದ್ಧಪಡಿಸಿ, ತುಂಗಭದ್ರಾ ಮಂಡಳಿಗೆ ಫೆಬ್ರುವರಿ-2024ರಲ್ಲಿ ಸಲ್ಲಿಸಲಾಗಿದೆ.<br>ಸದರಿ ವಿಷಯವನ್ನು ದಿನಾಂಕ:22.11.2024ರಂದು ನಡೆದ ತುಂಗಭದ್ರಾ ಮಂಡಳಿಯ ಸಭೆಯಲ್ಲಿ ಚರ್ಚಿಸಲಾಗಿದ್ದು, ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳ ಪ್ರತಿಕ್ರಿಯೆಗಳನ್ನು ಪಡೆದು, ಪರಿಶೀಲಿಸಿ, ಮುಂದಿನ ಸಭೆಗಳಲ್ಲಿ ಈ ವಿಷಯವನ್ನು ಚರ್ಚಿಸಲು ತೀರ್ಮಾನಿಸಲಾಗಿದೆ.<br>ಈ ಮಧ್ಯೆ, ನವಲಿ ಯೋಜನೆ ಸೇರಿದಂತೆ ಪರ್ಯಾಯ ಯೋಜನೆಗಳ ಕುರಿತು ಸಹಮತ ಮೂಡಿಸಲು ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಚರ್ಚಿಸುವ ಸಂಬಂಧ ಸಮಯ ಕೋರಿ ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಎರಡೂ ರಾಜ್ಯಗಳ ಮಾನ್ಯ ಮುಖ್ಯಮಂತ್ರಿಗಳಿಗೆ ದಿನಾಂಕ:14.02.2025 ರಂದು ಪತ್ರ ಬರೆಯಲಾಗಿದ್ದು, ಪ್ರತಿಕ್ರಿಯೆ ನಿರೀಕ್ಷಿಸಲಾಗಿದೆ. |

ಜಸಂಇ 40 ಎಂಎಲ್ಎ 2025

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ